ಅತಿ ವೇಗವಾಗಿ ಹಿಂಬಾಲಿಸುತ್ತಿದ್ದ ಇಲಾಖಾ ಲಾರಿ ಮುಂದೆ ಹೋಗಲು ಸ್ಥಳವಿಲ್ಲದೆ, ಆ ಕಾರಿಗೆ ಹಿಂದಿನಿಂದ ಡಿಕ್ಕಿ ಹೊಡೆಯಿತು. ಕಾರಿನ ತಪಾಸಣೆಯನ್ನು ಮಾಡಿದಾಗ ಯಾವುದೇ ಅರಣ್ಯ ಉತ್ಪನ್ನಗಳನ್ನು ಕಳ್ಳಸಾಗಾಣಿಕೆ ಮಾಡುತ್ತಿರುವುದು ಕಂಡು ಬರಲಿಲ್ಲ. ಸದರಿ ಕಾರಿನ ಚಾಲಕ ಇಲಾಖೆ ಸಿಬ್ಬಂದಿಯ ಅನುಮಾನಕ್ಕೆ ಆಸ್ಪದವಾಗುವಂತೆ ನಡೆದುಕೊಂಡಿದ್ದರಿಂದ ಮಾತ್ರ ಈ ಘಟನೆ ನಡೆಸಲು ಅವಕಾಶವಾಯಿತು. ಇದರಲ್ಲಿ ಯಾವುದೇ ದರುದ್ದೇಶ ಇರುವುದಿಲ್ಲ. ಈ ಡಿಕ್ಕಿಯಿಂದ ಯಾರಿಗೂ ನೋವು ಉಂಟಾಗಿರುವುದಿಲ್ಲ. ಅದೇ ದಿನ ಬೆನವಳ್ಳಿ ಕ್ರಾಸ್‌ಹತ್ತಿರ ತನಿಖೆ ಮಾಡಿ, ಪಕ್ಕದ ಕಾಡಿನಲ್ಲಿ ಬಚ್ಚಿಟ್ಟಿದ್ದನ್ನು ಸುಮಾರು 2 ಕ್ವಿಂಟಾಲ್ ಶ್ರೀಗಂಧವನ್ನು ಇಲಾಖೆ ಸಿಬ್ಬಂದಿ ಪತ್ತೆ ಹಚ್ಚಿದ್ದು, ಇದು ಅವರ ಕರ್ತವ್ಯ ನಿಷ್ಠೆಯ ಹಾಗೂ ಈ ಘಟನೆಯ ಬಗೆಗಿನ ಉದ್ದೇಶವನ್ನು ದೃಢೀಕರಿಸುತ್ತದೆ. ಈ ಬಗ್ಗೆ ಅಂದೇ ಕೋರ್ಟಿಗೆ ಎಫ್.ಐ.ಆರ್. ಸಲ್ಲಿಸಲಾಗಿದೆ.

ಮಲಪ್ರಭಾ ನದಿಯಿಂದ ಪ್ರತಿವರ್ಷ ಪ್ರವಾಹ ಒಂದು ಸುಮಾರು 8-10 ಹಳ್ಳಿಗಳು ಮುಳುಗಡೆಯಾಗುತ್ತಿರುವುದರ ಬಗ್ಗೆ

ಶ್ರೀ ಬಿಬಿ ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಈ ಮಲಪ್ರಭಾ ನದಿಯಿಂದ ಪ್ರತಿ ವರ್ಷ ಬಂದು ಸುಮಾರು 8-10 ಹಳ್ಳಿಗಳು ಮುಳಗಡೆಯಾಗುವುದನ್ನು ತಪ್ಪಿಸುವ ಸಲುವಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ. ಎಂದು ಕೇಳಬಯಸುತ್ತೇನೆ .

ಶ್ರೀ ಡಿ. ಮಂಜುನಾಥ್ : (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯಸಚಿವ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಬಿಜಾಪುರ ಜಿಲ್ಲೆಯ 41 ಪ್ರವಾಹ ಪೀಡಿತ ಗ್ರಾಮಗಳನ್ನು (ಬಸವನ ಬಾಗೇವಾಡಿ-1 ಇಂಡಿ-26, ಹುನಗುಂದ-4 ಮತ್ತು ಬಾದಾಮಿ-10) ಸ್ಥಳಾಂತರಿಸಲು ಸರ್ಕರಕ್ಕೆ ಪ್ರಸ್ತಾವನೆ ಬಂದಿರುತ್ತದೆ. ಈ 41 ಗ್ರಾಮಗಳ 4140 ಕುಟುಂಬಗಳನ್ನು ಸ್ಥಳಾಂತರಿಸಿ, ಅಗತ್ಯ ನಾಗರೀಕ ಸೌಲಭ್ಯ ಒದಗಿಸಲು ರೂ. 19.15 ಕೋಟಿಗಳ ಅಗತ್ಯವಿರುತ್ತದೆಯೆಂದು ಅಂದಾಜಿಸಲಾಗಿದೆ.

ಮೇಲಿನ ಪ್ರಸ್ತಾವನೆಯಲ್ಲಿ ಬಾದಾಮಿ ತಾಲ್ಲೂಕಿನ ಕೆಳಕಂಡ 10 ಗ್ರಾಮಗಳು ಸೇರಿದೆ. 1) ನೀಲರಗಿ, 2) ಜಕನೂರು 3) ಮುಮರೆಡ್ಡಿಕೊಪ್ಪ 4) ಖ್ಯಾಡ 5) ಕಾತರಕಿ 6) ತಾವಕನಹಾಳ 7) ಶಿರಬಿಡ 8) ಆಲೂರು ಎಸ್. 9) ಸಬ್ಬಲಕೂಸಿ 10) ಹೆಬ್ಬಳ್ಳಿ ಅಲ್ಲಿನ ಗ್ರಾಮಗಳ 1755 ಕುಟುಂಬಗಳನ್ನು ಸ್ಥಳಾಂತರಿಸಲು 128 ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳ ಬೇಕಾಗುತ್ತದೆಯೆಂದು ಮತ್ತು ಮನೆಗಳ ನಿರ್ಮಾಣ ಮತ್ತು ಅಗತ್ಯ ನಾಗರೀಕ ಸೌಲಭ್ಯ ಒದಿಗಿಸಲು ರೂ. 301.00 ಲಕ್ಷಗಳು ಅಗತ್ಯವಿದೆಯೆಂದು ಅಂದಾಜಿಸಲಾಗಿದೆ.

ಒಂಬತ್ತನೇ ಹಣಕಾಸು ಆಯೋಗದ ಶಿಪಾರಸ್ಸಿನೊಂದಿಗೆ 1990-91ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುವ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯು ವಾರ್ಷಿಕ ಕೇವಲ ರೂ. 27.00 ಕೋಟಿಗಳ (ಕೇಂದ್ರ ಸರ್ಕಾರದ ಪಾಲು ರೂ. 20.25 ರಾಜ್ಯ ಸರ್ಕಾರದ ಪಾಲು ರೂ. 6.75 ಕೋಟಿಗಳು) ಬಂಡವಾಳನ್ನು ಹೊಂದಿದೆ. ಈ ಅನುದಾನದಲ್ಲಿ ಗ್ರಾಮಗಳ ಸ್ಥಳಾಂತರದಂತಹ ಕಾರ್ಯಕ್ಕೆ ತಗಲುವ ಬೃಹತ್ ಮೊಬಲಗನ್ನು ಭರಿಸುವುದು ಅಸಾಧ್ಯ.

ಈ ಹಿನ್ನಲೆಯಲ್ಲಿ ಮೇಲೆ ಹೇಳಲಾಗಿರುವ ಬಾದಾಮಿ ತಾಲ್ಲೂಕಿನ ಹತ್ತು ಗ್ರಾಮಗಳನ್ನು ಒಳಗೊಂಡಂತೆ ಬಿಜಾಪುರ ಜಿಲ್ಲೆಯ 41 ಗ್ರಾಮಗಳು ಸೇರಿದಂತೆ ಒಟ್ಟಾರೆ ರಾಜ್ಯದ 126 ಗ್ರಾಮಗಳ ಸ್ಥಳಾಂತರಕ್ಕಾಗಿ ರೂ. 42.67 ಕೋಟಿಗಳ ವೆಚ್ಚದ ಯೋಜನೆಯೊಂದನ್ನು ತಯಾರಿಸಿ, ದಿನಾಂಕ 26.11.93 ರಂದು ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಮನವಿ ಪತ್ರ ದಲ್ಲಿ ಸೇರಿಸಿ ಆರ್ಥಿಕ ನೆರವು ಕೋರಲಾಗಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಅಧ್ಯಕ್ಷರೇ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನೇತ್ರಾವತಿ ಸೇತುವೆಯ ಪಕ್ಕ ಕೆಲವರು ಚಿಪ್ಪುಸುಣ್ಣ ಬೇಯಿಸುವ ಕೆಲಸ ಮಾಡುತ್ತಾ ಇದ್ದಾರೆ. ಈ ದಂಡೆ ರಾತ್ರಿ ಹೊತ್ತಿನಲ್ಲಿ ನಡೆಯುತ್ತಾ ಇದೆ. ಚಿಪ್ಪುಸುಣ್ಣ ಬೇಯಿಸುವುದರಿಂದ ಅದರ ಹೊಗೆ ವಾತಾವರಣ ತುಂಬಿ ಅತ್ಯಂತ ದುರ್ಗಂಧ ವಾಸನೆಯಿಂದ ಕೂಡಿರುತ್ತದೆ ಅಷ್ಟು ಮಾತ್ರವಲ್ಲ ಹೊಗೆ ತುಂಬ ರಸ್ತೆಯಲ್ಲಿ ಸಂಚಾರ ಮಾಡತಕ್ಕ ವಾಹನಗಳಿಗೆ ವಾಸನೆ ಮತ್ತು ಕಣ್ಣು ಉರಿಯಿಂದ ರಸ್ತೆಗಳು ಕಾಣದೆ ಹಲವಾರು ವಾಹನಗಳು ಸೇತುವೆ ಯಿಂದ ಕೆಳಗೆ ಬಿದ್ದು ಅಪಘಾತ ಉಂಟಾಗಿ ಜೀವಹಾನಿ ಉಂಟಾಗಿದೆ. ಈ ಬಗ್ಗೆ ಸಂಬಂಧಪಟ್ಟವರ ಗಮನಕ್ಕೆ ತಂದಿದ್ದರೂ ಏನೂ ಪ್ರಯೋಜನವಾಗಿರುವುದಿಲ್ಲ. ಆದುದರಿಂದ ಈ ಪರಿಸರ ಮಾಲಿನ್ಯ ಮತ್ತು ಅಪಘಾತಕ್ಕೆ ಕಾರಣವಾಗಿರುವ ಈ ಕೆಲಸವನ್ನು ತಕ್ಷಣ ಅಲ್ಲ ನಿಲ್ಲಿಸುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸರ್ಕಾರದ ಗಮನ ಸೆಳೆಯುತ್ತೇನೆ.

ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನೇತ್ರಾವತಿ ಸೇತುವೆಯ ಪಕ್ಕ ಕೆಲವರು ಚಿಪ್ಪುಸುಣ್ಣ ಬೇಯಿಸುವುದರಿಂದ ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಗಿರುವ ಬಗ್ಗೆ.

ಶ್ರೀ ಪಿ.ಸಿ. ಸಿದ್ದನ ಗೌಡರ್ (ಸಕ್ಕರೆ ಜವಳಿ, ವಿಜ್ಞಾನ ಮತ್ತು ಯಂತ್ರ ಕಲಾ ಹಾಗೂ ಪರಿಸರ ಮತ್ತು ಜೀವಶಾಸ್ತ್ರ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಪಾಣೆ ಮಂಗಳೂರು ಬಳಿ ನೇತ್ರಾವತಿ ನದಿಯ ದಂಡೆಯ ಮೇಲೆ ರಾಷ್ಟ್ರೀಯ ಹೆದ್ದಾರಿ 48ರ ಸಮೀಪ ಈ ಕೆಳಕಂಡ ಸುಣ್ಣದ ಭಟ್ಟಿಗಳು ಕೆಲಸ ನಿರ್ವಹಿಸುತ್ತಿವೆ.

1. ಪಿ.ಎನ್. ಇಂಡಸ್ಟ್ರೀಸ್ (ಮಾಲೀಕರು- ಶ್ರೀ ಅಹಮದ್)
2. ಕರ್ನಾಟಕ ಲೈಮ್ ಇಂಡಸ್ಟ್ರೀಸ್ ಕೆ.ಎಸ್. ಟಿ.ನಂ. 3140426 (ಮಾಲೀಕರು-ಶ್ರೀ ಸುಲೇಮಾನ್)
3. ಮುಬಾರಕ್ ಲೈಮ್ ಇಂಡಸ್ಟ್ರೀಸ್ (ಮಾಲೀಕರು-ಶ್ರೀ ಮುಬಾರಕ್)
4. ತವಕಲ್ ಲೈಮ್ ಇಂಡಸ್ಟ್ರೀಸ್ (ಮಾಲೀಕರು-ಶ್ರೀ ಅಬ್ದುಲ್ ಖಾದರ್)

ಈ ಬಟ್ಟಿಗಳು ಸಣ್ಣ ಪ್ರಮಾಣದಾಗಿದ್ದು ಸುಮಾರು 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದೆಂದು ತಿಳಿದು ಬಂದಿದೆ. ಈ ಭಟ್ಟಿಗಳಲ್ಲಿ ಕಪ್ಪೆ ಚಿಪ್ಪಿನಿಂದ ಸುಣ್ಣವನ್ನು ತಯಾರಿಸುತ್ತಿದ್ದು ಇದ್ದಿಲನ್ನು ಉರವಲಾಗಿ ಉಪಯೋಗಿಸಲಾಗುತ್ತಿದೆ. ಈ ಭಟ್ಟಿಗಳು ರಾಷ್ಟ್ರೀಯ ಹೆದ್ದಾರಿ ಸೇತುವೆಯ ಮಟ್ಟಕ್ಕಿಂತ ಬಹಳ ತಗ್ಗಿನಲ್ಲಿ ಇರುತ್ತವೆ. ಹಾಗೂ ಯಾವುದೇ ವಿಧವಾದ ವಾಯು ಮಾಲಿನ್ಯ ಸಿಯಂತ್ರಣ ಉಪಕರಣಗಳನ್ನು ಮತ್ತು ಸಮರ್ಪಕವಾದ ಹೊಗೆ ನಳಿಕೆಗಳನ್ನು ಅಳವಡಿಸಿಲ್ಲ. ಈ ಭಟ್ಟಿಗಳು ಹೆಚ್ಚಾಗಿ ರಾತ್ರಿ ಸಮಯ ಕಾರ್ಯ ನಿರ್ವಹಿಸುತ್ತಿದ್ದು ಕಾರ್ಯವನ್ನು ಹಾಗೂ ರಾಷ್ಟ್ರೀಯ ಹೆದ್ದಾರಿ ಭಾಗವನ್ನು ಆವರಿಸುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಹಾಗೂ ಇದರಿಂದ ಸುತ್ತಮುತ್ತ ವಾಸಿಸುವ ನಗರ ಆರೋಗ್ಯಕ್ಕೆ ಹಾನಿಕರವಾಗಿದೆ. ಈ ಭಟ್ಟಿಗಳು ರಾಷ್ಟ್ರೀಯ ಹೆದ್ದಾರಿ 48ಕ್ಕೆ ಅತಿ ಸಮೀಪ ಹಾಗೂ ಸೇತುವೆಯ ಮಟ್ಟಕ್ಕಿಂತ ಬಹಳ ತಗ್ಗಿನಲ್ಲಿ ಇರುವುದರಿಂದ ಎತ್ತರವಾಗಿ ಹೊಗೆ ನಳಿಕೆಗಳನ್ನು ಅಳವಡಿಸಿದ್ದರೂ ಸಹಾ ಹೊಗೆಯು ರಾಷ್ಟ್ರೀಯ ಹೆದ್ದಾರಿ ಭಾಗವನ್ನು ಆವರಿಸಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ. ಈಗಿರುವ ಭಟ್ಟಿಗಳಿಗೆ ಸರಿಯಾದ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ಆಗುವುದಿಲ್ಲ.

ಈ ಭಟ್ಟಿಗಳನ್ನು ಬೇರೆ ಸೂಕ್ತವಾದ ಸ್ಥಳಕ್ಕೆ ಸ್ಥಳಾಂತರಿಸುವುದು ಸಮಂಜಸವಾಗಿರುತ್ತದೆ. ಈ ವಿಷಯವನ್ನು ದಿನಾಂಕ 10-5-94 ಮತ್ತು 16-6-94ರಂದು ಜಿಲ್ಲಾಧಿಕಾರಿಗಳ